ಓದಿ ಹೇಳುತ್ತೇನೆ. ನಾನು ಕೂಗುತ್ತಿದ್ದಂತೆ ಆ ಕುಟುಂಬದ ಯಜಮಾನ ಮುಂದೆ ಬಂದು ಪೆಟ್ಟಿಗೆಯಲ್ಲಿ ಮಡಚಿಟ್ಟಿದ್ದ ಕಾಗದದ ಚೀಟಿಯನ್ನು ಎತ್ತಿಕೊಳ್ಳಲಿ. ಇಲ್ಲಿರುವ ಎಲ್ಲಾ ಕುಟುಂಬಗಳ ಯಜಮಾನರು ಚೀಟಿಗಳನ್ನು ಎತ್ತುವವರೆಗೆ ಯಾರೂ ಚೀಟಿಗಳನ್ನು ಬಿಡಿಸಿ ನೋಡಬಾರದು, ಯಾರಿಗೂ ತೋರಿಸಲೂ ಬಾರದು." ಪ್ರತಿ ವರ್ಷ ಇದನ್ನು ಮಾಡುತ್ತಾ ಬಂದಿದ್ದ ಅವರಿಗೆಲ್ಲ ಹೆಚ್ಚು ಹೇಳಬೇಕಿರಲಿಲ್ಲ. ಅತ್ತ ಇತ್ತ ನೋಡದೆ ಎಲ್ಲರೂ ತಂತಮ್ಮ ಸರದಿಗೆ ಕಾಯುತ್ತಾ ನಿಂತರು. ಸಮ್ಮರ್ಸ್ ಕೈಯನ್ನೊಮ್ಮೆ ಮೇಲಕ್ಕೆತ್ತಿ "ಆಡಮ್ಸ್." ಎಂದು ಕರೆದ. ಆ ವ್ಯಕ್ತಿ ಜನಜಂಗುಳಿಯಿಂದ ಬಿಡಿಸಿಕೊಂಡು ಮುಂದೆ ಬರತೊಡಗಿದ.

"ಹಾಯ್, ಸ್ಟೀವ್!" ಎಂದ ಸಮ್ಮರ್ಸ್.

"ಹಾಯ್, ಜ್ಯೋ!" ಮುಗುಳ್ನಗಲು ಪ್ರಯತ್ನಿಸುತ್ತಾ ಹೇಳಿದ ಆಡಮ್ಸ್. ನಂತರ ಕಪ್ಪು ಪೆಟ್ಟಿಗೆಯೊಳಗೆ ಕೈ ಹಾಕಿ ಒಂದು ಮಡಚಿಟ್ಟಿದ್ದ ಚೀಟಿಯನ್ನು ಎತ್ತಿಕೊಂಡು ಬೇಗಬೇಗನೆ ತನ್ನ ಜಾಗವನ್ನು ಸೇರಿಕೊಂಡ.

ಹೀಗೆ ಸಮ್ಮರ್ಸ್ ಹೆಸರುಗಳನ್ನು ಓದುತ್ತಲೇ ಹೋದ.

"ಮೊನ್ನೆ ಮೊನ್ನೆನೇ ಲಾಟರಿ ಎತ್ತಿದಂತೆ ಭಾಸವಾಗುತ್ತಿದೆ ಅಲ್ವ?" ಮಿಸೆಸ್ ಡೆಲಾಕ್ರೂಜ್ ಪಕ್ಕದಲ್ಲಿದ್ದ ಮಿಸೆಸ್ ಗ್ರೇವ್ಸ್‌ಳಿಗೆ ಹೇಳಿದಳು.

"ಹೌದು, ಕಾಲ ಸರಿದು ಹೋದದ್ದೇ ಗೊತ್ತಾಗುವುದಿಲ್ಲ." ಮಿಸೆಸ್ ಗ್ರೇವ್ಸ್ ಉತ್ತರಿಸಿದಳು.

"ಕ್ಲಾರ್ಕ್ ಡೆಲಾಕ್ರೂಜ್..." ಸಮ್ಮರ್ಸ್ ಕೂಗಿದ.

"ಓಹ್, ನಮ್ಮನೆಯವರ ಹೆಸರು ಬಂತಪ್ಪ." ಕ್ಲಾರ್ಕ್ ಪೆಟ್ಟಿಗೆಯ ಕಡೆಗೆ ಹೆಜ್ಜೆ ಹಾಕಿದಾಗ ಮಿಸೆಸ್ ಡೆಲಾಕ್ರೂಜ್ ಉಸಿರು ಬಿಗಿ ಹಿಡಿದು ನಿಂತಳು.

"ಡೇನಿಯಲ್ಸ್." ಹೆಸರು ಕರೆಯುತ್ತಿದ್ದಂತೆ ಮಿಸೆಸ್ ಡೇನಿಯಲ್ಸ್ ಮುಂದೆ ಬಂದಳು.

"ಹೆದರಬೇಡಮ್ಮ ಜೇನಿ..." ಯಾರೋ ಆಕೆಗೆ ಧೈರ್ಯ ತುಂಬಿದರು.

"ಮುಂದಿನ ಸರದಿ ನಮ್ಮದು..." ಶ್ರೀಮತಿ ಗ್ರೇವ್ಸ್ ಹೇಳಿದಳು. ಶ್ರೀಮತಿ ಡೇನಿಯಲ್ಸ್ ಲಾಟರಿ ಎತ್ತಿ ಬರುತ್ತಿದ್ದಂತೆ ಮಿಸ್ಟರ್ ಗ್ರೇವ್ಸ್ ಹೋಗಿ ಬಂದ. ಈ ವರೆಗೆ ಚೀಟಿ ಎತ್ತಿ ಬಂದಿದ್ದವರು ಚೀಟಿಯನ್ನು ಒಮ್ಮೆ ಆ ಕೈಗೆ ಒಮ್ಮೆ ಈ ಕೈಗೆ ಬದಲಾಯಿಸುತ್ತಾ ಕಾತರದಿಂದ ಚಡಪಡಿಸುತ್ತಿದ್ದರು.

"ಹರ್ಬರ್ಟ್... ಹರ್ಬರ್ಟ್ ಹಚಿನ್ಸನ್..." ಸಮ್ಮರ್ಸ್ ಓದಿ ಹೇಳಿದ.

"ಒಮ್ಮೆ ಹೋಗಿ ಬನ್ನಿರಲ್ಲ!" ಹಿಂದೇಟು ಹಾಕುತ್ತಿರುವವನಂತೆ ಕಾಣಿಸುತ್ತಿದ್ದ ಅವನಿಗೆ ಮಡದಿ ತಾಳ್ಮೆ ಕಳೆದುಕೊಂಡಂತೆ ಹೇಳಿದಳು. ಎಲ್ಲರೂ ಒಮ್ಮೆ ನಗೆಯಾಡಿದರು. ಉಸಿರುಗಟ್ಟಿದಂತಿದ್ದ ವಾತಾವರಣ ಸ್ವಲ್ಪ ತಿಳಿಯಾಯಿತು.

"ಜೋನ್ಸ್..." ಸಮ್ಮರ್ಸ್ ಕರೆದ.

"ಉತ್ತರದ ಕೆಲವು ಊರುಗಳಲ್ಲಿ ಲಾಟರಿ ಎತ್ತುವುದನ್ನು ನಿಲ್ಲಿಸುತ್ತಾರಂತೆ?" ಆಡಮ್ಸ್, ಪಕ್ಕದಲ್ಲಿ ನಿಂತಿದ್ದ ವಾರ್ನರ್ ಅಜ್ಜನಿಗೆ ಹೇಳಿದ.

"ಅವರಿಗೆ ಹುಚ್ಚು ಹಿಡಿದಿದೆ!... ಆ ಊರುಗಳಿಗೆ ಖಂಡಿತವಾಗಿಯೂ ದಾರಿದ್ರ್ಯ ಕಾದಿದೆ ನೋಡ್ತಿರು!... 'ಜೂನ್ ತಿಂಗಳಲ್ಲಿ ಎತ್ತಿದರೆ ಲಾಟರಿ, ಜೋಳದ ಫಸಲು ರಾಶಿ, ರಾಶಿ!' ಅಂತ ಹಿರಿಯರು ಸುಮ್ಮ ಸುಮ್ಮನೇ ಗಾದೆ ಹೊಸೆದಿಲ್ಲ." ಎಂದ ವಾರ್ನರ್ ದನಿ ಎತ್ತರಿಸಿ.

"ಸುಮಾರು ಊರುಗಳಲ್ಲಿ ಈಗಾಗಲೇ ನಿಲ್ಲಿಸಿದ್ದಾರಂತೆ." ಶ್ರೀಮತಿ ಆಡಮ್ಸ್ ಹೇಳಿದಳು.

"ಈಗಿನ ಹುಡುಗರಿಗೆ ಮೈಬಗ್ಗಿಸಿ ಕೆಲಸ ಮಾಡೋಕ್ಕಾಗಲ್ಲ. ಸೋಮಾರಿಗಳು. ಮಣ್ಣು ತಿನ್ನಬೇಕು ಅಷ್ಟೇ!" ಎಂದ ಕೋಪದಿಂದ.